ಸಿಕ್ಕಿಬಿಟ್ಟಿದ್ದರೆ, ಕಳ್ಳನೆಂದು ಪೊಲೀಸಿನವರು ಕೂಡಾಕಿಕೊಂಡುಬಿಟ್ಟಿದ್ದರೆ, ಅನಿಸುತ್ತಲೇ ಕುಸಿದು ಹೋದ. ಕಣ್ಣೀರು ಬುಳುಗುಟ್ಟಿದವು. ಹೊಟ್ಟೆ ಮಳಸಿದಂತಾಯ್ತು. ಏನೊಂದೂ ತೋಚದವನಾಗಿ ತೊಳಲಾಡುತ್ತಿದ್ದವನಿಗೆ ಅಕಸ್ಮಾತ್ ಅಪ್ಪ ಊರಿಗೋಗುವ ಮನಸು ಮಾಡಿದ್ದರೆ, ಅಂತ ಹೊಳೆದದ್ದೇ ತಡ ಥಟ್ಟನೆ ಬಸ್‌ಸ್ಟ್ಯಾಂಡಿನ ದಾರಿ ಹಿಡಿದ. ಊಟದ ಹೊತ್ತು ಮೀರೋಗಿತ್ತು. ಜಿಗಿಜಿಗಿಸುತ್ತಿದ್ದ ಬೀದಿ ದೀಪಗಳು ಇರುಳನ್ನೂ ನಿಗಿನಿಗಿ ಹಗಲಾಗಿಸಿದ್ದವು.

ಗಿಜಿಗುಡುತ್ತಿದ್ದ ಬಸ್‌ಸ್ಟ್ಯಾಂಡಿನಲ್ಲಿ ಗದ್ದಲವೋ ಗದ್ದಲವಿತ್ತು. ಬಸ್ಸುಗಳು ಹೋಗುವ ಮಾರ್ಗ, ಹೊರಡುವ ವೇಳೆಯನ್ನು ಧ್ವನಿವರ್ಧಕವೊಂದು ದೊಡ್ಡ ಗಂಟಲಿನಲ್ಲಿ ಅದನ್ನೂ ಹಿಂದಿಕ್ಕುತ್ತಿತ್ತು. ದಮ್ಮುಕಟ್ಟಿಕೊಂಡು ಬಸ್‌ಸ್ಟ್ಯಾಂಡಿನ ಉದ್ದಗಲಕ್ಕೂ ತಡಕಾಡಿದ. ಎಲ್ಲೂ ಕಾಣದ್ದರಿಂದ ಎದೆಬಡಿತ ಬಿರುವಾಗಿ, ಮೈಯ್ಯಂಥ ಮೈಯ್ಯೆಲ್ಲಾ ಯಮಭಾರವಾದಂತಾಗಿ, ಬೆಂಚೊಂದರಲ್ಲಿ ಕುಸಿಯುತ್ತಲೇ ಕಳ್ಳತ್ತಿದಂತಾಗಿ, ಕಣ್ಣಿಗೆ ಕತ್ತಲು ಕಟ್ಟಿದಂತಾಗಿ ಹಂಗೇ ಕಣ್ಮುಚ್ಚಿದ. 'ಎಷ್ಟು ಸಾರ್ತಿನೋ ಹೇಳೋದು ನಿಂಗೆ ಬಾಗ್ಲು ಮುಚ್ಕೋ ಹೊತ್ತಲ್ಲಿ ಹಿಂಗೆಲ್ಲಾ ರೋಸ್ಬೇಡ ಅಂತ' ಹತ್ತಿರದಲ್ಲಿ ಇದ್ದಕ್ಕಿದ್ದಂತೆ ಗುಡುಗಿದ ದಡಿ ದನಿಗೆ ಅರೆ ಎಚ್ಚರಗೊಂಡರೂ ಕಣ್ಣುಗಳು ಎಳೆಯುತ್ತಲೇ ಇದ್ದವು. ಇನ್ನೇನು ಮತ್ತೆ ನಿದ್ದೆಗೆ ಜಾರಬೇಕೆನ್ನುವಷ್ಟರಲ್ಲಿ, 'ಕಳ್ಳಧವ ನಿಂಗೆ ಹಿಂಗೆಲ್ಲಾ ಹೇಳಿದ್ರೆ ಮೈಗತ್ತಲ್ಲ ತಾಳು' ಅನ್ನುತ್ತಲೇ ಧಡ್ ಅನ್ನುವ ಸದ್ದೆದ್ದು, ಅದರ ಹಿಂದೆಯೇ ದೊಪ್ ಅಂದ ಮಗದೊಂದು ಸದ್ದು ಜೊತೆಗೂಡಿ, 'ಅಯ್ಯಯ್ಯೋ ಸಿವ್ನೇ' ಅನ್ನುವ ಆರ್ತನಾದವೊಂದು ಚಿಕ್ಬಸವನನ್ನು ಚಕ್ಕನೆ ಎಚ್ಚರಗೊಳಿಸಿತು. ಅದು ಅಪ್ಪನ ದನಿ ಅಂತ ಗೊತ್ತಾಗುತ್ತಲೇ ಬುದೂರನೆದ್ದು ಸದ್ದು ಬಂದೆಡೆಗೆ ನುಗ್ಗಿದ. ಕೆಳಗೆ ಬಿದ್ದಿದ್ದ ಕಾಟ್ಮಾರಯ್ಯ ಮೇಲೇಳಲು ಯಣಗುತ್ತಿದ್ದ. ಕೆಲವರು ಅವನನ್ನು ದಾಟಿಕೊಂಡು, ಮತ್ತೆ ಕೆಲವರು ಬಳಸಿಕೊಂಡು ಓಡಾಡುತ್ತಿದ್ದರು. ಚಿಕ್ಬಸವನನ್ನು ಕಾಣುತ್ತಲೇ. 'ಲೋ ಮಗಾ ನನ್ನ ಊರ್‍ಗೆ ಕರ್ಕಂಡು ಹೋಗ್ಬಿಡಪ್ಪ' ಅನ್ನುತ್ತಲೇ ಕಾಟ್ಮಾರಯ್ಯ ಗ್ಯಾನ ತಪ್ಪಿದ.

## 5

ತಿರುಗಿ ಗ್ಯಾನ ಬಂದಾಗ, 'ಮಗಾ ಇದ್ಯಾಕ್ಲ ಈ ಸಂತೆಯೊಳಿಕೆ ಕರ್ಕಂಡ್ ಬಂದು ಕೂರ್‍ಸಿದೀಯ' ಅನ್ನುತ್ತಾ ಕಾಟ್ಮಾರಯ್ಯ ಚಿಕ್ಬಸವನನ್ನೇ ದಿಟ್ಟಿಸಲು ಚಿಕ್ಬಸವ ಮೂಕನಾದ. ಒಮ್ಮೆಗೇ ಅಪ್ಪನನ್ನು ತಬ್ಬಿಕೊಂಡು ಮೆಲ್ಲಗೆ ಮುಖದಡವಿದ. ಕುರುಚಲು ಗಡ್ಡ, ಗೆಡ್ಡೆ ಮೂಗು, ಹಣೆಯಲ್ಲಿನ ಗಾಯದ ಕಲೆ, ಮುಂದೆ ಪೂರಾ ಬೋಳಾಗಿದ್ದ ತಲೆ... ಚಿಕ್ಕವನಿದ್ದಾಗ ಸಂತೆಯ ದಿನ ಹೆಗಲ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದ, ತನ್ನೊಂದಿಗೆ ಊಟಕ್ಕೆ ಕೂರಿಸಿಕೊಳ್ಳುತ್ತಿದ್ದ, ಊರಾಚೆಯ ಕಟ್ಟೆಯಲ್ಲಿ ಕುತ್ತಿಗೆವರೆಗಿನ ನೀರಲ್ಲಿ ಈಜು ಕಲಿಸುತ್ತಿದ್ದ, ಕಾರೆ ಮುಳ್ಳಲ್ಲಿ ಬುಗುರಿ ಕೆತ್ತಿ ಕೊಡುತ್ತಿದ್ದ, ಮೇಣೆಯನ್ನು ಹಿಡಿಯಲು ಕಲಿಸಿದ್ದ, ಗೆಳೆಯನಂತಿದ್ದ... ಕಳೆದೋಗಿದ್ದ ಅಪ್ಪ ಮತ್ತೆ ಸಿಕ್ಕಂತಾಗಿ ಚಿಕ್ಬಸವ ಸಣ್ಣದೊಂದು ಪುಳಕಕ್ಕೊಳಗಾದ.

ಮನೆ ಸೇರಿದಾಗ ಸರೊತ್ತಾಗಿತ್ತು. ಚಿಕ್ಬಸವನೇ ಖುದ್ದು ಅಪ್ಪನಿಗೆ ಊಟ ಮಾಡಿಸಿ, ಬಟ್ಟೆಗಳನ್ನು ಬದಲಾಯಿಸಿ ಅಪ್ಪನ ಪಕ್ಕವೇ ಮಲಗಿದ. ಅವ್ವ ಎಷ್ಟು ಅರುಚಾಡಿದರೂ ಇನ್ನು ಸುಮ್ಮನಿರೋದು ಥರವಲ್ಲ ವತಾರೆಗೇ ಮನೋವೈದ್ಯರಿಗೆ ತೋರಿಸಬೇಕು, ಅನಿವಾರ್ಯವಾದರೆ ಅಡ್ಮಿಟ್ ಮಾಡಬೇಕು, ಯಜಮಾನರನ್ನು ಒಂದಷ್ಟು ಸಾಲ ಕೇಳಬೇಬೇಕು ಅಂತ ಅಂದುಕೊಂಡ. 'ಮಳ್ಳಜ್ಜನ ಮಾತುಗಳ್ನ ಅಪ್ಪನಿಗೇಳಿ ತಪ್ಪುಮಾಡ್ದೆ' ಅನ್ನುವ ಇಕ್ಕಟ್ಟಿಗೊಳಗಾದ ಚಿಕ್ಬಸವನಿಗೆ ನಿದ್ದೆ ಹತ್ತುವಾಗ ಮುಂಜಾವದ ಕೋಳಿ ಕೂಗುವ ಹೊತ್ತಾಗಿತ್ತು. 'ಇದೇನ್ಲಾ ಮಗಾ ಎಳೆ ಕಿಸ್ಲೆಯಂಗೆ ಅಪ್ಪುನ್ ಮ್ಯಾಲೆ ಕಾಲೇರ್‍ಕಂಡು ಮಲ್ಗಿದೀಯಾ' ಅವ್ವನ ಮಾತಿಗೆ ಎಚ್ಚರಗೊಂಡ ಚಿಕ್ಬಸವ ಸಣ್ಣಗೆ ನಾಚಿದ. ಹೊರಗೆ ಬಿಸಿಲು ಬಲಿಯತೊಡಗಿತ್ತು.